ಕಾಡಿಗೆ ಕಣ್ಣು

ಕಲೀಮ್ ಉಲ್ಲಾ



# ಹಿಮಾಲಯದಲ್ಲಿ ಎಡತಾಕಿದ ಅದೃಷ್ಟ

ಯಃಕಶ್ಚಿತ್ ಶ್ವಾನ ನೋಡಿ ಬದಲಾದ ಅವನ ಮುಖಚರ್ಯೆ ವಿಚಿತ್ರ ಎನಿಸಿತು. 'ನಿಮ್ಮ ಅದೃಷ್ಟ' ಎಂದ. ಈ ಅಸ್ಪಷ್ಟದವನು ನೆಟ್ಟಗೆ ಒಂದನ್ನೂ ಹೇಳದೆ ಆತಂಕ ಸೃಷ್ಟಿಸುತ್ತಿರುವುದು ನಮಗೂ ಇರುಸು ಮುರುಸು ಎನಿಸತೊಡಗಿತ್ತು.

ಹಿಮಾಲಯಕ್ಕೆ ಹೋಗುವ ಅವಕಾಶ ಒದಗಿ ಬಂದಿತ್ತು. ತೇನ್‌ಸಿಂಗ್ ಹತ್ತಿದ ಪರ್ವತವನ್ನೇ ನಾನು ಹತ್ತುತ್ತಿದ್ದೇನೆ ಎಂದೇ ಭಾವಿಸಿದ್ದೆ. ಆದರೆ ಈ ವಿಷಯ ಸತ್ಯವಾಗಿರಲಿಲ್ಲ. ಅಸಲಿಗೆ ಹಿಮಾಲಯ ಎಂಬ ಶ್ರೇಣಿಯೇ ವಿಚಿತ್ರವಾಗಿ ಹಬ್ಬಿರುವ ಒಂದು ಮಹಾವಲಯ. ಇಲ್ಲಿ ಸಾಹಸಿಗಳಿಗಾಗಿ ಕಾಯುವ ಲೆಕ್ಕವಿಲ್ಲದಷ್ಟು ಪರ್ವತಗಳು ಎದೆ ತೆರೆದು ನಿಂತಿವೆ. ಒಂದೊಂದಕ್ಕೂ ಒಂದೊಂದು ವಿಶಿಷ್ಟ ಹೆಸರುಗಳಿವೆ. ಇದರಲ್ಲಿ ತೇನ್‌ಸಿಂಗ್ ಏರಿದ್ದು ಮಾತ್ರ ಅತ್ಯಂತ ಕಠಿಣ ಮಾರ್ಗದ ಶಿಖರ. ಇದ್ದುದರಲ್ಲಿ ನಾವು ಆರಿಸಿಕೊಂಡಿದ್ದು ಕೊಂಚ ಸಲೀಸಾದ 'ಕೇದಾರ್ ಕಾಂಟ್' ಎಂಬ ಜನಗಳೇ ಇಲ್ಲದ ಶಿವನ ಸಾನ್ನಿಧ್ಯದ ಜಾಗ. ಈ ರೇಂಜಿನಲ್ಲಿ ಸಿಗುವ ಯಾವ ಪರ್ವತಗಳ ಹತ್ತಿಳಿದರೂ ಪರ್ವತಾರೋಹಿಗಳು ಮಾತ್ರ ಹಿಮಾಲಯ ಚಾರಣ ಮಾಡಿದ್ದೇನೆ ಎಂದೇ ಹೇಳುತ್ತಾರೆ. ನಮ್ಮದೂ ಇದೇ ಕಥೆ.

ಎಂಟನೇ ಕ್ಲಾಸಿನಲ್ಲಿ ನಮಗೆ ಮೌಂಟ್ ಎವರೆಸ್ಟ್ ಬಗ್ಗೆ ಒಂದು ಪಾಠವಿತ್ತು. ಇದನ್ನು ನಮ್ಮ ಕನ್ನಡ ಮೇಷ್ಟ್ರು ಸ್ವತಃ ತಾವೇ ಹೋಗಿ ತೇನ್‌ಸಿಂಗನ ಸೊಂಟ ಹಿಡಿದು ಪರ್ವತ ಹತ್ತಿಸಿ ಬಂದವರಂತೆ ಚೆಂದ ಕಥೆ ಕಟ್ಟಿ ಹೇಳುತ್ತಿದ್ದರು. ನಮ್ಮ ಈ ಗುರುವರ್ಯರು ಇಲ್ಲದೇ ಹೋಗಿದ್ದರೆ ತೇನ್‌ಸಿಂಗ್ ಪರ್ವತವನ್ನೇ ಹತ್ತುತ್ತಿರಲಿಲ್ಲ ಎಂದೇ ಭಾವಿಸಿದ್ದೆವು. ಇದೊಂದು ವಿಷಯ ಚಿಕ್ಕಂದಿನಿಂದ ಮನದೊಳಗೆ ಇಳಿದುಹೋಗಿತ್ತು. ಪರ್ವತ ಏರುವುದು ಅತಿ ಕಷ್ಟವೆಂದೂ, ಅಲ್ಲಿನ ಊಟ ತಿಂಡಿಗಳು ಅಷ್ಟೊಂದು ಚೆನ್ನಾಗಿರುವುದಿಲ್ಲವೆಂದೂ ಕೆಲವರು ಹೇಳಿದ್ದರು. ರಾಶಿರಾಶಿ ಬರ್ಫು ಒಟ್ಟಿಗೆ ಬಿದ್ದ ಜಾಗೆ ನೋಡುವ ಆಸೆ ಕೆದಕಿ ಕೂತು ತಿನ್ನುವ ವಿಷಯದಲ್ಲಿ ರಾಜಿ ಮಾಡಿಕೊಂಡೆ.

ನಾವಿದ್ದ ಒಂಬತ್ತು ಜನರ ತಂಡದಲ್ಲಿ ಹಿಮಾಲಯದ ಫೋಟೋಗಳನ್ನು ಚಚ್ಚಿ ಬಿಸಾಡುವ ತಲಬು ಹೆಚ್ಚು ಹತ್ತಿದ್ದು ನನ್ನ ತಲೆಗೇನೆ. ಆಗ ನನ್ನ ಹತ್ತಿರ ಇದ್ದ ಸಾಮಾನ್ಯ ಕೆನಾನ್ ರೋಲ್ ಕ್ಯಾಮೆರಾಕ್ಕೆ ಇದ್ದದ್ದು ಕೇವಲ ಕಿಟ್ ಲೆನ್ಸ್ ಮಾತ್ರ. ಅದಕ್ಕೆ ಛಾರ್ಜು ಮಾಡಿ ಬಳಸುವ ಸಣ್ಣ ಶೆಲ್ಲುಗಳನ್ನು ಬಳಸುತ್ತಿದ್ದೆ. ಒಂದು ಸಲಕ್ಕೆ ನಾಲ್ಕು ಶೆಲ್ಲುಗಳನ್ನು ಅದರ ಕುಂಡಿಯೊಳಗೆ ತೂರಿಸಬೇಕಿತ್ತು. ಜೊತೆಗೆ ಹೆಚ್ಚುವರಿಯಾಗಿ ಒಂದು ಸೆಟ್ ಶೆಲ್ಲುಗಳ ಕೊಂಡು ಹೋಗಬೇಕಿತ್ತು. ಅದಕ್ಕೆ ತಗಲುವ ಕಾಸು ಕಡಿಮೆಯೇನಲ್ಲ. ಉಳಿದವರು ಬೆಚ್ಚಗಿನ ಬಟ್ಟೆಗಳು, ಗಟ್ಟಿ ಶೂಗಳು, ಉಣ್ಣೆಯ ಸ್ವೆಟರು,

